# ಆಸ್ತಿಗಳಿಕೆಯಲ್ಲಿ ಡಿಕೆಶಿ ವಿಶ್ವದಾಖಲೆ: ಇಡಿ

## ದೆಹಲಿ ಹೈಕೋರ್ಟ್‌ಲ್ಲಿ ಜಾಮೀನು ಅರ್ಜಿ ವಿಚಾರಣೆ | ಅರ್ಜಿ ತೀರ್ಪು ಕಾಯ್ದಿರಿಸಿದ ನ್ಯಾಯಾಲಯ

• **ಕನ್ನಡಪ್ರಭ ವಾರ್ತೆ** ನವದೆಹಲಿ 18/10/19

ಮಾಜಿ ಸಚಿವ ಡಿ.ಕೆ.ಶಿವಕುಮಾರ್ ಅವರು 300ರಷ್ಟು ಆಸ್ತಿ ಹೊಂದಿದ್ದು, ಕ್ರಿಕೆಟ್‌ನಲ್ಲಿ ತ್ರಿಬಲ್ ಸೆಂಚುರಿ ಬಾರಿಸಿ ಹೇಗೆ ದಾಖಲೆ ಮಾಡುತ್ತಾರೋ ಅದೇ ರೀತಿ ಇವರು ಆಸ್ತಿಗಳಿಕೆಯಲ್ಲಿ ವಿಶ್ವದಾಖಲೆ ಸ್ಥಾಪಿಸಿದ್ದಾರೆ ಎಂದು ಜಾರಿ ನಿರ್ದೇಶನಾಲಯ(ಇ.ಡಿ.)ಪರ ವಾದಿಸುತ್ತಿರುವ ಅಡಿಷನಲ್ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್ ಹೇಳಿ ಹೈಕೋರ್ಟ್ ಮುಂದೆ ಹೇಳಿದ್ದಾರೆ. ಈ ಮೂಲಕ ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಸದ್ಯ ತಿಹಾರ್ ಜೈಲಿನಲ್ಲಿರುವ ಡಿ.ಕೆ.ಶಿವಕುಮಾರ್ ಅವರ ವ್ಯವಹಾರದ ಅಗಾಧತೆಯನ್ನು ನ್ಯಾಯಾಲಯಕ್ಕೆ ಮನದಟ್ಟು ಮಾಡಿಕೊಡಲು ಯತ್ನಿಸಿದ್ದಾರೆ.

ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ತಿಹಾರ್ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಮಾಜಿ ಸಚಿವ ಡಿ.ಕೆ.ಶಿವಕುಮಾರ್ ಅವರ ಜಾಮೀನು ಅರ್ಜಿ ವಿಚಾರಣೆ ವೇಳೆ ವೇಳೆ ಎಎಸ್‌ಜಿ ನಟರಾಜ್ ಅವರು ನ್ಯಾ| ಸುರೇಶ್ ಕುಮಾರ ಕೈಟ್ ಅವರ ಏಕಸದಸ್ಯ ನ್ಯಾಯಪೀಠದ ಮುಂದೆ ಜಾಮೀನಿಗೆ ಆಕ್ಷೇಪ ವ್ಯಕ್ತಪಡಿಸಿದರು. ಈಗಾಗಲೇ ಡಿ.ಕೆ.ಶಿವಕುಮಾರ್ ಪರ ವಕೀಲರ ವಾದ ಆಲಿಸಿರುವ ಕೋರ್ಟ್, ಈ ಇ.ಡಿ. ಪರ ವಕೀಲರ ಪ್ರತಿವಾದದ ಬಳಿಕ ತೀರ್ಪನ್ನು ಕಾಯ್ದಿರಿಸಿದೆ.

ಗುರುವಾರ ವಾದ ಮಂಡನೆ ಮಾಡಿದ ನಟರಾಜ್, ಡಿ.ಕೆ.ಶಿವಕುಮಾರ್ ಅವರ ಪ್ರಕಣರದಲ್ಲಿ ಅವರ ಸೋದರ ಡಿ.ಕೆ.ಸುರೇಶ್ 27, ತಾಯಿ ಗೌರಮ್ಮ 38, ಡಿ.ಕೆ. ಶಿವಕುಮಾರ್ 24 ಆಸ್ತಿ ಹೊಂದಿದ್ದಾರೆ. ಆರೋಪಿಯು ಈ ಆಸ್ತಿ ತನ್ನ ತಂದೆಯಿಂದ, ವಿಲ್‌ಗಳ ಮೂಲಕ ಬಂದಿದೆ ಎಂದು ಹೇಳುತ್ತಿದ್ದಾರೆ. ಆದರೆ ಡಿ.ಕೆ.ಶಿವಕುಮಾರ್ ಮತ್ತವರ ಕುಟುಂಬದ ಸದಸ್ಯರ ಬಳಿ 300ಕ್ಕೂ ಹೆಚ್ಚು ಕೃಷಿಯೇತರ ಆಸ್ತಿಗಳಿವೆ. ಬಹುತೇಕ ಆಸ್ತಿಗಳನ್ನು ನಗದು ನೀಡಿ ಖರೀದಿಸಲಾಗಿದೆ. ಈ ಖರೀದಿಗೆ ಹಣದ ಮೂಲ ಯಾವುದು ಎಂದು ಶಿವಕುಮಾರ್ ಹೇಳಿಲ್ಲ. ಅವರ 22 ವರ್ಷದ ಮಗಳು ಐಶ್ವರ್ಯ ₹108 ಕೋಟಿ ವ್ಯವಹಾರ ಹೊಂದಿದ್ದು, ಇದರಲ್ಲಿ ₹40 ಕೋಟಿ ಸಾಲವನ್ನು ಅವರಿಗೆ ಯಾರು ಕೊಟ್ಟಿದ್ದಾರೆ ಎಂಬುದೇ ಗೊತ್ತಿಲ್ಲ. ಇದೇ ಮನಿ ಲಾಂಡರಿಂಗ್. ಶಿವಕುಮಾರ್ ಅವರದ್ದು ಮನಿ ಲಾಂಡರಿಂಗ್‌ನ ಕ್ಲಾಸಿಕ್ ಪ್ರಕರಣ ಎಂದು ನ್ಯಾಯಾಲಯಕ್ಕೆ ತಿಳಿಸಿದರು.

ಶಿವಕುಮಾರ್ ಮತ್ತವರ ಆಪ್ತರಿಗೆ ಸೇರಿದ ಜಾಗದ ಮೇಲೆ ಆದಾಯ ತೆರಿಗೆ ಇಲಾಖೆ ದಾಳಿ ನಡೆಸಿದಾಗ ₹8.59 ಕೋಟಿ ಹಣ ಸಿಕ್ಕಿತ್ತು. ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆಯಲಾಗಿತ್ತು. ಶಿವಕುಮಾರ್ ಈ ಹಣ ತಮ್ಮದೇ ಎಂದು ಹೇಳಿದ್ದಾರೆ. ಈ ಹಣದ ಮೂಲದ ಬಗ್ಗೆ ಪ್ರಶ್ನಿಸಿದಾಗ ಕೃಷಿಯಿಂದ ಬಂದಿದೆ ಎಂದಿದ್ದಾರೆ. 1989 ರಿಂದ ಆರೋಪಿ ಜನಪ್ರತಿನಿಧಿಯಾಗಿದ್ದಾರೆ. 14 ಜನರಿಗೆ ಸಮನ್ಸ್ ಮಾಡಲಾಗಿದೆ. ತನಿಖೆ ಪ್ರಗತಿಯಲ್ಲಿದೆ. ಆರೋಪಿಗೆ ಸಾಕ್ಷ್ಯಾಧಾರಗಳನ್ನು ತಿರುಚುವ ಅಭ್ಯಾಸವಿದೆ. ಡಿ.ಕೆ. ಶಿವಕುಮಾರ್ ಅವರದ್ದು ನಂಬಲಸಾಧ್ಯ, ಊಹಿಸಲಸಾಧ್ಯ, ಕಲ್ಪನೆಗೂ ಮೀರಿದ ಆಸ್ತಿ ಸಂಪಾದನೆ ಎಂದು ಎಎಸ್ಜಿ ವಾದಿಸಿದರು.